**A**

**CCE RF/PF**
**Revised Syllabus**

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ,**
**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD,**
**MALLESHWARAM, BENGALURU – 560 003**

**ಮಾರ್ಚ್/ಏಪ್ರಿಲ್ 2025 ರ ಪರೀಕ್ಷೆ - 1**

**MARCH/APRIL 2025 EXAMINATION - 1**

# ಮಾದರಿ ಉತ್ತರಗಳು

# MODEL ANSWERS

**ಸಂಕೇತ ಸಂಖ್ಯೆ : 33-K** **CODE NO. : 33-K**

# ವಿಷಯ : ದ್ವಿತೀಯ ಭಾಷೆ — ಕನ್ನಡ

# Subject : Second Language — KANNADA

**(ಶಾಲಾ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ)**

**(Regular Fresh / Private Fresh)**

**ದಿನಾಂಕ : 26. 03. 2025 ]** **[ ಗರಿಷ್ಠ ಅಂಕಗಳು : 80**

**Date : 26. 03. 2025 ]** **[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **I.** | ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) : | **4 × 1 = 4** |
| 1. | ರೂಢನಾಮಕ್ಕೆ ಉದಾಹರಣೆ<br>(ಎ) ಮಕ್ಕಳು (ಬಿ) ಅವರು<br>(ಸಿ) ಪುಟ್ಟಯ್ಯ (ಡಿ) ಶಿಕ್ಷಕ<br>*ಉತ್ತರ :* (ಎ) ಮಕ್ಕಳು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 2. | ಬೆನ್ನೆಲುಬು ಪದವು<br>(ಎ) ಆಗಮ ಸಂಧಿ (ಬಿ) ಲೋಪ ಸಂಧಿ<br>(ಸಿ) ಗುಣ ಸಂಧಿ (ಡಿ) ಆದೇಶ ಸಂಧಿ<br>***ಉತ್ತರ :*** (ಬಿ) ಲೋಪ ಸಂಧಿ | |
| 3. | 'ಉಡಿಗೆ ತೊಡಿಗೆ' ಪದವು ಹೊಂದಿರುವ ವ್ಯಾಕರಣಾಂಶ<br>(ಎ) ದ್ವಿರುಕ್ತಿ (ಬಿ) ಅನುಕರಣಾವ್ಯಯ<br>(ಸಿ) ಜೋಡುನುಡಿ (ಡಿ) ನುಡಿಗಟ್ಟು<br>***ಉತ್ತರ :*** (ಸಿ) ಜೋಡುನುಡಿ | |
| 4. | ಇದು ಕರ್ಮಧಾರಯ ಸಮಾಸ<br>(ಎ) ನೆಲಮುಗಿಲು (ಬಿ) ಅರಮನೆ<br>(ಸಿ) ಗಂಜಿಯುಂಡು (ಡಿ) ಹೊಂಬಾಳೆ<br>***ಉತ್ತರ :*** (ಡಿ) ಹೊಂಬಾಳೆ | |
| **II.** | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ**<br>**(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | **12 × 1 = 12** |
| 5. | ಪಂಡಿತಾರಾಧ್ಯ ಶಿವಾಚಾರ್ಯರ ಪ್ರಕಾರ ಈ ನಾಡಿನ ಬೆನ್ನೆಲುಬು ಯಾರು ?<br>***ಉತ್ತರ :***<br>ಪಂಡಿತಾರಾಧ್ಯ ಶಿವಾಚಾರ್ಯರ ಪ್ರಕಾರ ಈ ನಾಡಿನ ಬೆನ್ನೆಲುಬು ರೈತ (ಕೃಷಿಕ). | |
| 6. | ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುವ ಅಂಶಗಳು ಯಾವುವು ?<br>***ಉತ್ತರ :***<br>ಹಕ್ಕಿಯ ದೇಹಸ್ವರೂಪ, ಪರಿಸರದ ವೈಲಕ್ಷಣಗಳು, ಬಲಿ-ಬೇಟೆ ಸಂಬಂಧಗಳು ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುತ್ತವೆ. | |
| 7. | ವಿದ್ಯಾರ್ಥಿಗಳು ಕಾಫೀ ಕುಡಿಯಲು ಯಾವ ರೀತಿಯ ಕಪ್ಪುಗಳನ್ನು ಆರಿಸಿಕೊಂಡರು ?<br>***ಉತ್ತರ :***<br>ವಿದ್ಯಾರ್ಥಿಗಳು ಕಾಫೀ ಕುಡಿಯಲು ಬೆಲೆಬಾಳುವ ಕಪ್ಪುಗಳನ್ನು ಆರಿಸಿಕೊಂಡರು. | |
| 8. | ಗಂಗೆಯಲ್ಲಿ ತೇಲುತ್ತಿದ್ದ ನೂರಾರು ದೀಪಗಳು ಹೇಗೆ ಕಾಣುತ್ತಿದ್ದವು ?<br>***ಉತ್ತರ :***<br>ಗಂಗೆಯಲ್ಲಿ ತೇಲುತ್ತಿದ್ದ ನೂರಾರು ದೀಪಗಳು ನದಿಯ ಬಟ್ಟೆಗೆ ಬೆಳಕಿನ ಕಸೂತಿ ಹಾಕಿದಂತೆ ಕಾಣುತ್ತಿದ್ದವು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 9. | ಗೋಪಾಲನು ಹೊಸ ಪಂಚೆಯನ್ನು ಬಯಸಿದುದು ಏಕೆ ?<br>***ಉತ್ತರ :***<br>ಗೋಪಾಲನ ಗೆಳೆಯರು ಆತನ ಹರಿದ ಬಟ್ಟೆಯನ್ನು ನೋಡಿ ಹಾಸ್ಯಮಾಡುತ್ತಿದ್ದರು. ಆದ್ದರಿಂದ ಗೋಪಾಲನು ಹೊಸ ಪಂಚೆಯನ್ನು ಬಯಸಿದನು. | |
| 10. | ಹಾ.ಮಾ. ನಾಯಕ ಅವರು ತಿಳಿಸಿರುವಂತೆ ರೋಗಿಗಳು ಯಾರ ಬಳಿ ಹೋಗುತ್ತಾರೆ ?<br>***ಉತ್ತರ :***<br>ಹಾ.ಮಾ. ನಾಯಕ ಅವರು ತಿಳಿಸಿರುವಂತೆ ರೋಗಿಗಳು ವೈದ್ಯರ ಬಳಿ ಹೋಗುತ್ತಾರೆ. | |
| 11. | ನಮ್ಮ ದೈನಂದಿನ ಬದುಕಿನಲ್ಲಿ ಅಪರೂಪವಾಗಿರುವುದು ಯಾವುದು ?<br>***ಉತ್ತರ :***<br>ನಮ್ಮ ದೈನಂದಿನ ಬದುಕಿನಲ್ಲಿ ಸೌಜನ್ಯವು ತುಂಬ ಅಪರೂಪವಾಗಿದೆ. | |
| 12. | ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ಹೇಗೆ ಸಿಂಗಾರಗೊಳ್ಳುತ್ತಾಳೆ ?<br>***ಉತ್ತರ :***<br>ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳುತ್ತಾಳೆ. | |
| 13. | ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಕವಿ ಸಿ.ಪಿ.ಕೆ. ಅವರು ಹೇಳಿದ್ದಾರೆ ?<br>***ಉತ್ತರ :***<br>ನಮ್ಮ ಕರ್ತವ್ಯಗಳನ್ನು ಶಾಂತರೀತಿಯಿಂದ ಸದ್ದುಗದ್ದಲವಿಲ್ಲದೆ ಮಾಡಿ ಮುಗಿಸಬೇಕೆಂದು ಕವಿ ಸಿ.ಪಿ.ಕೆ. ಅವರು ಹೇಳಿದ್ದಾರೆ. | |
| 14. | ಅಡಿಗರ ಪ್ರಕಾರ ಪೌರುಷದ ಬಾಳ್ವೆ ಯಾವುದು ?<br>***ಉತ್ತರ :***<br>ಹಿಡಿದ ಒಳ್ಳೆಯ ದಾರಿಯಲ್ಲಿ ಕೊನೆಯವರೆಗೆ ಜೀವನವನ್ನು ಸಾಗಿಸುವುದೆ ಪೌರುಷದ ಬಾಳ್ವೆ ಎಂದು ಅಡಿಗರು ಹೇಳಿದ್ದಾರೆ. | |
| 15. | ಜನಪದರು ತುಂಬಿದ ಕುಣಿಗಲ್ ಕೆರೆ ಹೇಗೆ ಬಾಗಿದೆ ಎಂದು ಹೇಳಿದ್ದಾರೆ ?<br>***ಉತ್ತರ :***<br>ಜನಪದರು ತುಂಬಿದ ಕುಣಿಗಲ್ ಕೆರೆಯು ಬಾಳೆಯ ಹಣ್ಣಿನಂತೆ ಬಾಗಿದೆ ಎಂದು ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 16. | ಸಂತೆಯೊಳಗೊಂದು ಮನೆಯ ಮಾಡಿದರೆ ಯಾವುದಕ್ಕೆ ನಾಚಬಾರದು ?<br>***ಉತ್ತರ :***<br>ಸಂತೆಯೊಳಗೊಂದು ಮನೆಯ ಮಾಡಿದರೆ ಶಬ್ದಕ್ಕೆ ನಾಚಬಾರದು. | |
| **III.** | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು**<br>**(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು) :** | **8 × 2 = 16** |
| 17. | ರೈತರು ಎದುರಿಸುತ್ತಿರುವ ಸಮಸ್ಯೆಗಳು ಯಾವುವು ?<br>***ಉತ್ತರ :***<br>ಉತ್ತಮ ಬೀಜಗಳ ಕೊರತೆ, ಭೂಮಿ ಬರಡಾಗುತ್ತಿರುವುದು ಕ್ರಿಮಿ-ಕೀಟಗಳ ಹಾವಳಿ, ಬೆಳೆಗೆ ವಿವಿಧ ರೀತಿಯ ರೋಗಗಳು, ಮಳೆಯ ಅಭಾವ, ಅತಿವೃಷ್ಟಿ ಇವಲ್ಲದೆ ತಾನು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ಇರುವುದು ಇವೆಲ್ಲವೂ ರೈತರು ಎದುರಿಸುತ್ತಿರುವ ಸಮಸ್ಯೆಗಳಾಗಿವೆ. | |
| 18. | ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು ? ವಿವರಿಸಿ.<br>***ಉತ್ತರ :***<br>ಹಕ್ಕಿಗಳು ಗೂಡನ್ನು ನಿರ್ಮಿಸುವುದು ಮುಖ್ಯವಾಗಿ ರಕ್ಷಣೆಗಾಗಿ. ಶೀತಗಾಳಿ, ಬಿರುಗಾಳಿ, ಮಳೆ, ಪ್ರವಾಹಗಳ ವಿರುದ್ಧ ಬದುಕಲು ಅವುಗಳಿಗೆ ಗೂಡುಬೇಕು. ಮರುಭೂಮಿಯಂಥ ಪ್ರದೇಶಗಳಲ್ಲಿ ಮರಳಿನ ಹೊಡೆತ, ಪ್ರಖರ ಸೂರ್ಯರಶ್ಮಿ ಮುಂತಾದ ಹವಾಮಾನ ವೈಪರೀತ್ಯಗಳನ್ನು ಪ್ರತಿರೋಧಿಸಲು ಗೂಡುಬೇಕು. ಮೊಟ್ಟೆ ಮರಿಗಳನ್ನು ರಕ್ಷಿಸಿಕೊಳ್ಳಲು, ತಮ್ಮನ್ನು ಬೇಟೆಯಾಡುವ ಪ್ರಾಣಿಗಳಿಂದ ತಪ್ಪಿಸಿಕೊಳ್ಳಲು ಈ ಎಲ್ಲಾ ಉದ್ದೇಶಗಳಿಗಾಗಿ ಹಕ್ಕಿಗಳು ಗೂಡನ್ನು ನಿರ್ಮಿಸುತ್ತವೆ. | |
| 19. | ಹೆಡ್ ಮಾಸ್ತರರು ತಂದಿಟ್ಟ ಟ್ರೇನಲ್ಲಿ ಯಾವ ಯಾವ ತರಹದ ಕಪ್ಪುಗಳಿದ್ದವು ?<br>***ಉತ್ತರ :***<br>ಹೆಡ್ ಮಾಸ್ತರರು ತಂದಿಟ್ಟ ಟ್ರೇನಲ್ಲಿ ಕೆಲವು ಅತ್ಯಂತ ಬೆಲೆಬಾಳುವಂತಹವು, ಚೈನಾ ಪಿಂಗಾಣಿಗಳು, ಸುಂದರ ಗಾಜಿನವು, ಪ್ಲಾಸ್ಟಿಕ್ ಕಪ್ಪುಗಳು, ಇನ್ನು ಕೆಲವು ಏನೂ ಬೆಲೆಬಾಳದ ಸ್ಟೀಲಿನ ಲೋಟಗಳು ಇದ್ದವು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 20. | ನಮ್ಮ ಬದುಕು ಕೆಸರಿನ ಕಮಲದಂತಿರಬೇಕು ಏಕೆ ?<br>*ಉತ್ತರ :*<br>ಕಮಲವು ಕೆಸರೊಳಗೆ ಹುಟ್ಟಿದ್ದರೂ ಕೆಸರನ್ನು ನೋಡದೆ, ಅಂಟಿಸಿಕೊಳ್ಳದೆ ಇರುತ್ತದೆ. ರವಿಯ ಕಿರಣಗಳಿಗೆ ಮೆರೆದಾಡಿ ದೇವರ ಮುಡಿಯನ್ನು ಸೇರಿ ತನ್ನ ಜೀವನವನ್ನು ಸಾರ್ಥಕ ಮಾಡಿಕೊಳ್ಳುತ್ತದೆ. ಹಾಗೆಯೇ ಮನುಷ್ಯನು ಪರಹಿತ ಕಾರ್ಯವನ್ನು ಮಾಡುವುದೆ ಜೀವನದ ಗುರಿಯನ್ನಾಗಿಸಿಕೊಳ್ಳಬೇಕು. ಹೀಗೆ ಜೀವನ ನಡೆಸಿದರೆ ಅವನ ಜೀವನ ಸಾರ್ಥಕವಾಗುತ್ತದೆ. | |
| 21. | ಕಬ್ಬಕ್ಕಿಗಳು ಬಾಯಿ ಬಿಡಲು ಕಾರಣಗಳೇನು ?<br>*ಉತ್ತರ :*<br>ಕುಣಿಗಲ್ ಕೆರೆಯು ವಿಶಾಲವಾದ ಕೆರೆಯಾಗಿದೆ. ಅನೇಕ ಜೀವಿಗಳಿಗೆ ಆಶ್ರಯವನ್ನು ನೀಡಿದೆ. ಜನರ ಬದುಕಿನ ಆಧಾರವೂ ಆಗಿದೆ. ಅದರಲ್ಲಿರುವ ಚಿಕ್ಕ ಚಿಕ್ಕ ಜಲಚರಗಳನ್ನು ತಿನ್ನಲು ಕಬ್ಬಕ್ಕಿಗಳು ಬಾಯ ತೆರೆದು ಹಾರಾಡುತ್ತಿರುತ್ತವೆ. ಅದನ್ನು ಜನಪದರು ಕಬ್ಬಕ್ಕಿ ಬಾಯ ಬಿಡುತಾವೆ ಎಂದು ವರ್ಣಿಸಿ ಹೇಳಿದ್ದಾರೆ. | |
| 22. | ಉತ್ತರನು ಶತ್ರುಬಲಕೆ 'ನಮೋ' ಎಂದು ಹೇಳಲು ಕಾರಣವೇನು ?<br>*ಉತ್ತರ :*<br>ಉತ್ತರಕುಮಾರನು ವಿಶಾಲವಾದ ಸಾಗರದಂತಿರುವ ಸೈನ್ಯವನ್ನು ನೋಡಿ ಭಯಪಡುತ್ತಾನೆ. ಕಣ್ಣುಗಳಿಗೆ ಏನು ಕಾಣುತ್ತಿಲ್ಲ. ಮನಸ್ಸಿಗೆ ಏನು ತೋಚುತ್ತಿಲ್ಲ. ಜೀವವಿದ್ದರೆ ನಾಳಿನ ಅದ್ಭುತವನ್ನು ಕಾಣಬಹುದು. ಭೂಮಿಯೆ ಎಲ್ಲ ಮಕ್ಕಳನ್ನು ಇಲ್ಲಿಯೇ ಹೆತ್ತಂತೆ ಕಾಣುತ್ತಿದೆ. ಈ ಸೈನ್ಯದೊಡನೆ ಯುದ್ಧ ಮಾಡಲು ಸಾಕ್ಷಾತ್ ಶಿವನೇ ಬರಬೇಕು. ನನ್ನಿಂದ ಸಾಧ್ಯವಿಲ್ಲವೆಂದು ಶತ್ರುಬಲಕ್ಕೆ 'ನಮೋ' ಎನ್ನುತ್ತಾನೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 23. | ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಉಳಿಸಿದ ಬಗೆಯನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ. | |
| | ***ಉತ್ತರ :*** | |
| | ವೈದ್ಯರು ಭೀಮನಾಯಕನ ಮಗುವಿನ ನಾಡಿಯನ್ನು ಹಿಡಿದು ಜ್ವರದ ತೀವ್ರತೆಯನ್ನು ಪರೀಕ್ಷಿಸಿದರು. ತಮ್ಮಲ್ಲಿದ್ದ ಔಷಧಿಯನ್ನು ಮಗುವಿಗೆ ಕುಡಿಸಿದರು. ಕತ್ತಲೆಯ ರಾತ್ರಿಯಲ್ಲಿ ಕಾಡಿನಲ್ಲಿ ಅಲೆದು ತಮಗೆ ಬೇಕಾದ ಸೊಪ್ಪನ್ನು ಹುಡುಕಿ ತಂದರು. ಮತ್ತೊಮ್ಮೆ ಸೊಪ್ಪಿನ ರಸದೊಂದಿಗೆ ಔಷಧಿಯನ್ನು ಕುಡಿಸಿದರು. ತಮ್ಮ ಕುಪ್ಪಿಯಲ್ಲಿದ್ದ ಲೇಹವನ್ನು ಹಣೆಯ ತುಂಬ ಬಳಿದರು. ಕೋಳಿ ಕೂಗುವ ಹೊತ್ತಿಗೆ ಮಗು ನಿಚ್ಚಳವಾಗಿ ಕಣ್ಣು ತೆರೆದಿತ್ತು. ಮೈ ಬೆವರಿನಿಂದ ನೆನೆದಿತ್ತು. ಭೀಮನಾಯಕ ವೈದ್ಯರಿಗೆ ಕೃತಜ್ಞತೆಯನ್ನು ಹೇಳಿದನು. ಈ ರೀತಿಯಾಗಿ ವೈದ್ಯರು ಭೀಮನಾಯಕನ ಮಗನ ಪ್ರಾಣ ಉಳಿಸಿದರು. | |
| 24. | ಕನ್ನಡಿಗರ ಕಾವ್ಯರಚನಾ ಶೈಲಿಯನ್ನು ಕವಿಯು ಹೇಗೆ ವರ್ಣಿಸಿದ್ದಾರೆ ? | |
| | ***ಉತ್ತರ :*** | |
| | ಕನ್ನಡನಾಡಿನ ಜನರು ಹೇಳ ಬಯಸಿದ್ದನ್ನು ಹದವಾಗಿ ಹೇಳುತ್ತಾರೆ. ಹದವಾಗಿ ಹೇಳಿರುವುದನ್ನು ಶೋಧಿಸಿ ನೋಡುವ ಚತುರರು ಆಗಿದ್ದಾರೆ. ಉದ್ದೇಶಪೂರ್ವಕವಾಗಿ ಓದದಿದ್ದರೂ ಕಾವ್ಯ ಪ್ರಯೋಗ ಮಾಡುವಷ್ಟು ಪರಿಣತಿಯನ್ನು ಹೊಂದಿದ್ದಾರೆ ಎಂದು ಕವಿರಾಜಮಾರ್ಗಕಾರನು ಕನ್ನಡಿಗರ ಕಾವ್ಯರಚನಾ ಶೈಲಿಯನ್ನು ಕುರಿತು ವರ್ಣಿಸಿದ್ದಾರೆ. | |
| **IV.** | **ಕವಿ / ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | **1 × 3 = 3** |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿಗಳು, ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 25. | *ಜಿ.ಎಸ್. ಶಿವರುದ್ರಪ್ಪ:*<br>***ಉತ್ತರ :***<br>ಡಾ. ಜಿ.ಎಸ್. ಶಿವರುದ್ರಪ್ಪನವರು ೭. ೨. ೧೯೨೬ ರಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಈಸೂರು ಗ್ರಾಮದಲ್ಲಿ ಜನಿಸಿದ್ದಾರೆ. ಕವಿ ಮತ್ತು ವಿಮರ್ಶಕರಾದ ಇವರು ಸೌಂದರ್ಯ ಸಮೀಕ್ಷೆ, ಕಾವ್ಯಾರ್ಥಚಿಂತನ, ಮಾಸ್ಕೊದಲ್ಲಿ ೨೨ ದಿನ, ಸಾಮಗಾನ, ಚೆಲುವ-ಒಲವು, ಸಂಜೆದಾರಿ, ದೇವಶಿಲ್ಪ, ದೀಪದ ಹೆಜ್ಜೆ, ತೀರ್ಥವಾಣಿ, ಕಾರ್ತೀಕ, ಅನಾವರಣ, ಗಂಗೆಯ ಶಿಖರಗಳಲ್ಲಿ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಸೋವಿಯತ್ ಲ್ಯಾಂಡ್ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಂಪ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ರಾಷ್ಟ್ರಕವಿ ಪ್ರಶಸ್ತಿಗಳು ದೊರೆತಿವೆ. | |
| **V.** | **ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯುವುದು :** | **1 × 3 = 3** |
| | ಪಠ್ಯಾಂಶಕ್ಕೆ | 2 ಅಂಕಗಳು |
| | ಪದ ಬಳಕೆ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 26. | ಮೈಕೊಡವಿ ಎದ್ದ ಜಗ ಖಗ ಪಕ್ಷಿ ಪ್ರಾಣಿಗಳು<br>ಲಗುಬಗೆಯ ದಗದಕ್ಕೆ ಹೊರಟಂತಿದೆ<br>ಹೊಸತು ಜೀವೋಲ್ಲಾಸ ಚಿಗಿತ ಭಾವವಿಲಾಸ<br>ನೆಲ ಮುಗಿಲ ವಾಲಗವೆ ನಡೆದಂತಿದೆ.<br>***ಉತ್ತರ :***<br>ಈ ಪದ್ಯಭಾಗವನ್ನು ಬಸವರಾಜ ಸಾದರ ಅವರ 'ಸಿಸಿಫಸರ ಸುತ್ತು' ಕವನ ಸಂಕಲನದ 'ಸವಿಚೈತ್ರ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.<br>ಯುಗದ ಆದಿಯಲ್ಲಿ ನೆಲದಮ್ಮ ನವವಧುವಿನಂತೆ ಸಿಂಗಾರಗೊಂಡಿರುತ್ತಾಳೆ. ಎಲ್ಲ ಜೀವಿಗಳಲ್ಲೂ ಹೊಸ ಚೈತನ್ಯ, ಹೊಸ ಉಲ್ಲಾಸ ಒಡಮೂಡಿರುತ್ತದೆ. ಅದನ್ನು ಕವಿ ಜಡತ್ವವನ್ನು ತೊಡೆದು ಹೊಸ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಹುರುಪಿನಿಂದ ತಮ್ಮ ತಮ್ಮ ಕಾರ್ಯದಲ್ಲಿ ತೊಡಗಿವೆ ಎಂದು ಹೇಳಿದ್ದಾರೆ. ಹೊಸ ಹೊಸ ಭಾವನೆಗಳನ್ನು ಹೊಂದಿ ಉತ್ಸಾಹ ಭರಿತವಾಗಿ ಜಗದ ಕಾರ್ಯ ನಡೆದಿದೆ. ಖಗ, ಪಕ್ಷಿ, ಪ್ರಾಣಿಗಳ ಕಲರವದ ವಾಲಗ ಭೂಮಿಯಿಂದ ಆಕಾಶಕ್ಕೆ ತಲುಪಿದಂತೆ ಭಾಸವಾಗುತ್ತಿದೆ. ಎಂದು ಯುಗಾದಿಯ ಸಂದರ್ಭವನ್ನು ಕವಿ ಸೊಗಸಾಗಿ ವರ್ಣಿಸಿದ್ದಾರೆ. | |
| **VI.** | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | **1 × 3 = 3** |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಮತ್ತು ಸಮನ್ವಯಗೊಳಿಸುವುದು | 2 ಅಂಕಗಳು |
| | ಒಟ್ಟು | 3 ಅಂಕಗಳು |
| 27. | "ಪುಟ್ಟರಾಜರು ಸಂಗೀತ ಲೋಕದ ಧ್ರುವತಾರೆಯಂತೆ ಬೆಳಗಿದರು."<br>***ಉತ್ತರ :***<br>*ಅಲಂಕಾರದ ಹೆಸರು :* ಉಪಮಾಲಂಕಾರ<br>*ಲಕ್ಷಣ :* ಒಂದು ಮತ್ತೊಂದರಂತೆ ಇದೆ ಎಂದು ಹೋಲಿಸಿ ವರ್ಣಿಸುವುದನ್ನು ಉಪಮಾಲಂಕಾರ ಎನ್ನುತ್ತೇವೆ.<br>*ಉಪಮೇಯ :* ಪುಟ್ಟರಾಜರು<br>*ಉಪಮಾನ :* ಧ್ರುವತಾರೆ<br>*ಉಪಮಾವಾಚಕ :* ಅಂತೆ<br>*ಸಮಾನಧರ್ಮ :* ಬೆಳಗುವುದು<br>*ಸಮನ್ವಯ :* ಈ ವಾಕ್ಯದಲ್ಲಿ 'ಪುಟ್ಟರಾಜರು' ಎಂಬ ಉಪಮೇಯವನ್ನು 'ಧ್ರುವತಾರೆ' ಎಂಬ ಉಪಮಾನಕ್ಕೆ 'ಅಂತೆ' ಎಂಬ ಉಪಮಾವಾಚಕದ ಮೂಲಕ ಪುಟ್ಟರಾಜರು ಬೆಳಗಿರುವ ರೀತಿಯನ್ನು ಸಮಾನಧರ್ಮದೊಂದಿಗೆ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರಕ್ಕೆ ಉದಾಹರಣೆಯಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **VII.** | **ಗಾದೆಯನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 3 = 3** |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ-ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 28. | ಮನಸ್ಸಿದ್ದರೆ ಮಾರ್ಗ.<br>**ಅಥವಾ**<br>ತುಂಬಿದ ಕೊಡ ತುಳುಕುವುದಿಲ್ಲ. | |
| **VIII.** | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | **5 × 3 = 15** |
| | ಕೃತಿ, ಕರ್ತೃ ಮತ್ತು ಪಠ್ಯದ ಹೆಸರು | 1 ಅಂಕ |
| | ಯಾರು-ಯಾರಿಗೆ, ಸಂದರ್ಭ | 1 ಅಂಕ |
| | ಭಾಷಾಶೈಲಿ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 29. | "ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ."<br>***ಉತ್ತರ :***<br>ಈ ವಾಕ್ಯವನ್ನು ಅ.ರಾ. ಮಿತ್ರರವರು ಬರೆದಿರುವ 'ಮಹಾಭಾರತ ಪಾತ್ರ ಸಂಗತಿಗಳು' ಕೃತಿಯಿಂದ ಆಯ್ದ 'ಒಣಮರದ ಗಿಳಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಗಿಳಿಯು ಇಂದ್ರನಿಗೆ ಹೇಳುತ್ತದೆ. ಇಂದ್ರನು ಗಿಳಿಯ ತತ್ವನಿಷ್ಠೆ ಹಾಗೂ ಪರಹಿತಕಾಂಕ್ಷೆಯ ಗುಣವನ್ನು ಮೆಚ್ಚಿ ಏನಾದರು ವರವನ್ನು ಕೇಳು ಕೊಡುತ್ತೇನೆ ಎನ್ನುತ್ತಾನೆ. ಆಗ ಗಿಳಿಯು ದೇವರಾಜ ನನಗೆ ವರವನ್ನು ಕೊಡುವ ಇಚ್ಛೆ ಇದ್ದರೆ ಈ ಮರಕ್ಕೆ ಮೊದಲಿನಂತೆ ಹಸುರಿನಿಂದ ನಳನಳಿಸುವ, ಫಲಪುಷ್ಪದಿಂದ ಬೀಗುವ, ನೆರಳು ಕೊಡುವ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ವರವನ್ನು ದಯಪಾಲಿಸು! ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ ಎಂದು ಹೇಳುತ್ತದೆ. ಇಲ್ಲಿ ಗಿಳಿಯ ತತ್ವನಿಷ್ಠೆ ಹಾಗೂ ಪರಹಿತಕಾಂಕ್ಷೆಯ ಗುಣ ಸ್ವಾರಸ್ಯಕರವಾಗಿ ಅಭಿವ್ಯಕ್ತಗೊಂಡಿದೆ. | |
| 30. | "ಆ ಗೋಪಾಲ ಕೊಡಬೇಕು, ನಾವು ಉಣಬೇಕು." | |
| | ***ಉತ್ತರ :*** | |
| | ಈ ವಾಕ್ಯವನ್ನು ಕುವೆಂಪುರವರು ಬರೆದಿರುವ 'ನನ್ನ ಗೋಪಾಲ' ಎಂಬ ನಾಟಕದಿಂದ ಆಯ್ದ 'ನನ್ನ ಗೋಪಾಲ' ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ಈ ಮಾತನ್ನು ಗೋಪಾಲನ ತಾಯಿ ಗೋಪಾಲನಿಗೆ ಹೇಳುತ್ತಾಳೆ. ಗೋಪಾಲನು ಶಾಲೆಯಿಂದ ಮನೆಗೆ ಮರಳುವಾಗ ಬೈಗಿನ ಹೊತ್ತು ಕಾಡಿನ ದಾರಿಯಲ್ಲಿ ನನಗೆ ಹೆದರಿಕೆಯಾಗುತ್ತದೆ. ನೆರೆಯೂರಿಂದ ಬರುವ ಹುಡುಗರಿಗೆ ಜೊತೆಗೆ ಆಳುಗಳಿರುವರಮ್ಮ. ನನಗೆ ಮಾತ್ರ ಯಾರೂ ಇಲ್ಲ ಎಂದು ಹೇಳುತ್ತಾನೆ. ಆಗ ತಾಯಿ, ಮಗೂ ಅವರೆಲ್ಲ ಶ್ರೀಮಂತರ ಮಕ್ಕಳು, ಬೇಕಾದಷ್ಟು ಹಣವಿದೆ ಅವರಲ್ಲಿ. ನಮಗೆಲ್ಲಿ ಬರಬೇಕು ? ನೀನೆ ಬಲ್ಲೆ, ಹೊಟ್ಟೆಗೆ ಹಿಟ್ಟು ಸಿಕ್ಕುವುದೆ ಕಷ್ಟ. ನೂಲು ಮಾರಿ ಬಂದ ಮೂರು ಕಾಸಿನಲ್ಲಿ ನಮ್ಮ ಸಂಸಾರ ಸಾಗಬೇಕು. ನೋಡು "ಆ ಗೋಪಾಲ ಕೊಡಬೇಕು, ನಾವು ಉಣಬೇಕು" ಎಂದು ಹೇಳುವಲ್ಲಿ ತಾಯಿಯ ನಿಷ್ಕಲ್ಮಶ ಮನಸ್ಸು, ದೈವದ ಮೇಲಿನ ಭಕ್ತಿ ಸುಂದರವಾಗಿ ಅಭಿವ್ಯಕ್ತಗೊಂಡಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 31. | "ಸಿಡುಕು ಮಿಡುಕನು ತೊರೆದು ಮೌನಿಯಾಗು."<br>***ಉತ್ತರ :***<br>ಈ ವಾಕ್ಯವನ್ನು ಸಿ.ಪಿ. ಕೃಷ್ಣಕುಮಾರ್ ಅವರು ರಚಿಸಿದ 'ಬೊಗಸೆ' ಕವನಸಂಕಲನದಿಂದ ಆಯ್ದ 'ಸದ್ದು ಮಾಡದಿರು' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಕವಿಗಳು ಹೇಳಿದ್ದಾರೆ. ಮಾನವ ಅಹಂ ತೊರೆದು ಶಾಂತಿ, ಸಹನೆ, ಪ್ರೀತಿಗಳಿಂದ ತನ್ನದಾದ ಕರ್ತವ್ಯಗಳನ್ನು ಮೌನವಾಗಿ ಮಾಡಿ ಮುಗಿಸಬೇಕು. ಕೂಗಾಟ ಹಾರಾಟದಿಂದ ಯಾವ ಫಲವೂ ಇಲ್ಲ. ಹಸಿಸೌದೆ ಬಸುಗುಟ್ಟಿ ದನಿಯನ್ನು ಎತ್ತುತ್ತದೆ. ತನ್ನ ಕರ್ತವ್ಯವನ್ನು ಪೂರೈಸುವುದಿಲ್ಲ. ಮದ್ದು ಕಿಡಿಸೋಕಿದ ತಕ್ಷಣ ಸಿಡಿದು ಅಬ್ಬರಿಸಿ ನಾಶವಾಗುತ್ತದೆ. ಹೀಗಿರದೆ ಸೂರ್ಯ ಕಿರಣಗಳಿಗೆ ಕರಗುವ ಇಬ್ಬನಿಯಂತೆ ನಮ್ಮ ಕರ್ತವ್ಯಗಳನ್ನು ಮೌನದಲ್ಲಿ ಮಾಡಿ ಮುಗಿಸಬೇಕು. ಸಿಡುಕು ಮಿಡುಕನ್ನು ತೊರೆಯಬೇಕು ಎಂದು ಕವಿ ಸಂದೇಶ ನೀಡಿದ್ದಾರೆ. ಇಲ್ಲಿ ಸಾರ್ಥಕ ಜೀವನದ ಮೌಲ್ಯ ಅಭಿವ್ಯಕ್ತಗೊಂಡಿದೆ. | |
| 32. | "ವೇಷ ಧರಿಸಿ ಫಲವೇನಯ್ಯ."<br>***ಉತ್ತರ :***<br>ಈ ವಾಕ್ಯವನ್ನು 'ವಚನಗಳು' ಪದ್ಯದ ಸಿದ್ಧರಾಮೇಶ್ವರ ವಚನದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಸಿದ್ಧರಾಮೇಶ್ವರರು ಡಾಂಭಿಕರನ್ನು ಕುರಿತು ಹೇಳಿದ್ದಾರೆ. ವೇಷಧರಿಸಿದ ಮೇಲೆ ವೇಷದಂತೆ ಆಚರಣೆಯು ಇರಬೇಕು. ಅಂದರೆ ಮಾನವನ ನಡೆ ನುಡಿಗಳೆರಡು ಒಂದಾಗಿರಬೇಕು. ಅಂದಾಗ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಮನುಷ್ಯ ಜೀವನ ಸಾರ್ಥಕತೆಯನ್ನು ಪಡೆದುಕೊಳ್ಳುತ್ತದೆ. ವೇದಗಳನ್ನು ಅಧ್ಯಯನ ಮಾಡಿದ ನಂತರ ಅದರ ಮೌಲ್ಯಗಳನ್ನು ಜೀವನದಲ್ಲಿ ರೂಢಿಸಿಕೊಳ್ಳಬೇಕು. ಇಲ್ಲದಿದ್ದರೆ ಜೀವನ ವ್ಯರ್ಥವಾಗುತ್ತದೆ. ಉದಾಹರಣೆಗೆ ನೀರನ್ನು ಬಯಸಿ ಕೆರೆ ತೋಡಿದಾಗ ಅದರಲ್ಲಿ ನೀರು ಬರದೆ ಇದ್ದರೆ ಕೆರೆ ತೋಡಿದ್ದು ನಿಷ್ಪ್ರಯೋಜಕವಾಗುತ್ತದೆ. ಆದ್ದರಿಂದ ವೇಷಧರಿಸಿದ ಮೇಲೆ ವೇಷದಂತೆ ಆಚರಣೆ ಇರಬೇಕು. ಎಂಬ ಮೌಲ್ಯವನ್ನು ಮಾರ್ಮಿಕವಾಗಿ ನಿದರ್ಶನಗಳೊಂದಿಗೆ ಸ್ವಾರಸ್ಯಕರವಾಗಿ ಹೇಳಿದ್ದಾರೆ. | |
| 33. | "ನಾಡ ನರಿಯವೊಲು ಹಲುಗಿರಿಯೆ ಬಿಡುವೆನೆ." <br> ***ಉತ್ತರ :*** <br> ಈ ವಾಕ್ಯವನ್ನು ಕುಮಾರವ್ಯಾಸ ರಚಿಸಿದ 'ಕರ್ಣಾಟ ಭಾರತ ಕಥಾಮಂಜರಿ' ಅಥವಾ 'ಗದುಗಿನ ಭಾರತ' ಎಂಬ ಕೃತಿಯಿಂದ ಆಯ್ದ 'ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ. <br> ಈ ಮಾತನ್ನು ಅರ್ಜುನ ಉತ್ತರಕುಮಾರನಿಗೆ ಹೇಳುತ್ತಾನೆ. ವಿಶಾಲವಾದ ಕೌರವರ ಸೈನ್ಯವನ್ನು ನೋಡಿದ ಉತ್ತರನು ಜೀವಭಯದಿಂದ ರಥದಿಂದ ಜಿಗಿದು ನಿಟ್ಟೋಟದಲಿ ಓಡಲು ಆರಂಭಿಸುತ್ತಾನೆ. ಆಗ ಅರ್ಜುನ ಅವನನ್ನು ಹಿಡಿದು ನಿಲ್ಲಿಸುತ್ತಾನೆ. ಅರಮನೆಯ ಸ್ತ್ರೀಯರ ಮುಂದೆ ಏನೆಲ್ಲ ಜಂಭಕೊಚ್ಚಿಕೊಳ್ಳುತ್ತಿದ್ದೆಯಲ್ಲ ಈಗೇನಾಯಿತು ನಡೆ ಯುದ್ಧ ಮಾಡು ಎನ್ನುತ್ತಾನೆ. ಉತ್ತರಕುಮಾರನು ಭಯದಿಂದ ಹುಸಿನಗೆ ನಗುತ್ತಾ ನಾನು ಯುದ್ಧ ಮಾಡಲಾರೆ ಎನ್ನುತ್ತಾನೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಆಗ ಅರ್ಜುನ ನಾಡನರಿಯ ಹಾಗೆ ಹಲ್ಲುಕಿರಿದರೆ ಬಿಡುವೆನೆ ಯುದ್ಧ ಮಾಡುನಡೆ ಎಂದು ಗದರಿಸುತ್ತಾನೆ. ಅರ್ಜುನ ಎಷ್ಟೇ ಗದರಿಸಿದರೂ, ಆಮಿಷಗಳನ್ನು ತೋರಿದರೂ ಉತ್ತರನು ಯುದ್ಧ ಮಾಡುವುದಿಲ್ಲ. ಇಲ್ಲಿ ಉತ್ತರನ ಹೇಡಿತನ ಹಾಸ್ಯಮಯವಾಗಿ ಸ್ವಾರಸ್ಯಕರವಾಗಿ ಮೂಡಿಬಂದಿದೆ. | |
| **IX.** | **ಪದ್ಯಭಾಗ ಪೂರ್ಣಗೊಳಿಸಿ ಬರೆಯುವುದು :**<br>**(ತಪ್ಪಿಲ್ಲದೆ ಬರೆದ ಪೂರ್ಣಸಾಲುಗಳಿಗೆ ಒಟ್ಟಾರೆ ನಾಲ್ಕು ಅಂಕಗಳು)** | **1 × 4 = 4** |
| 34. | ಏಕಾಂಗಿ ವೀರನಂತೆ ..........................................<br>..............................................................<br>..............................................................<br>........................................ ಕತ್ತಲಲ್ಲಿ ನಡೆದನು<br>**ಅಥವಾ**<br>ಕಾಡು ಕಾಡು ..............................................<br>..............................................................<br>..............................................................<br>.............................. ಮಹಾಬೆಳಕೊಂದು ಕಂಡಿತು<br>***ಉತ್ತರ :***<br>ಏಕಾಂಗಿ ವೀರನಂತೆ ಮಧ್ಯರಾತ್ರಿ ಎದ್ದನು<br>ಮಡದಿ ಮಗುವ ತೊರೆದನವನು ಅಡವಿ ದಾರಿ ಹಿಡಿದನು<br>ಅರಮನೆಯ ಮೋಹವನ್ನು ಹರಿದುಹಾಕಿ ಹೋದನು<br>ಗೊತ್ತು ಗುರಿಯು ಇಲ್ಲದಂತೆ ಕತ್ತಲಲ್ಲಿ ನಡೆದನು<br>**ಅಥವಾ**<br>ಕಾಡು ಕಾಡು ಅಲೆದ ಅವಗೆ ನಾಡಿನರ್ಥ ಹೊಳೆಯಿತು<br>ಕೋಗಿಲೆಯ ಹಾಡದೊಂದು ದೂರದಿಂದ ಕೇಳಿತು<br>ಬೆಳ್ಳಿಚುಕ್ಕಿ ಬಾನಿನಲ್ಲಿ ಆಗತಾನೆ ಬೆಳಗಿತು<br>ಬೋಧಿವೃಕ್ಷದಲ್ಲಿ ಮಹಾಬೆಳಕೊಂದು ಕಂಡಿತು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| X. | **ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | **1 × 4 = 4** |
| | ವಿಷಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿ, ಪದ ಬಳಕೆಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 35. | ಅಂಗಹೀನತೆ ಸಾಧನೆಗೆ ಅಡ್ಡಿಯಾಗದು ಎಂಬ ಮಾತು ಪುಟ್ಟರಾಜರ ಜೀವನದಲ್ಲಿ ನಿಜವಾಗಿದೆ ಎಂಬುದನ್ನು ನೀವು ಮೆಚ್ಚುವ ಅಂಶಗಳೊಂದಿಗೆ ವಿವರಿಸಿ.<br><br>**ಅಥವಾ**<br><br>ಪುಟ್ಟಯ್ಯ ಸಮಾಜಕ್ಕೆ ಮುಡುಪಾದ ಪ್ರಸಂಗವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.<br><br>***ಉತ್ತರ :***<br><br>'ಅಂಗಹೀನತೆ ಸಾಧನೆಗೆ ಅಡ್ಡಿಯಾಗದು' ಎಂಬ ಮಾತು ಪುಟ್ಟರಾಜರ ಜೀವನದಲ್ಲಿ ನಿಜವಾಗಿದೆ. ಪುಟ್ಟರಾಜರು ಕಣ್ಣುಗಳನ್ನು ಕಳೆದುಕೊಂಡಿದ್ದರೂ ಸೋದರಮಾವ ಚಂದ್ರಶೇಖರಯ್ಯ ಹಾಗೂ ಪಂಚಾಕ್ಷರಿ ಗವಾಯಿಗಳ ಮಾರ್ಗದರ್ಶನದಲ್ಲಿ ಸಂಗೀತಗಾರರಾಗಿ, ದಾರ್ಶನಿಕರಾಗಿ, ಸಮಾಜ ಸೇವಕರಾಗಿ, ಸಾಹಿತಿಗಳಾಗಿ ನಭದೆತ್ತರಕ್ಕೆ ಬೆಳೆದು ಸಂಗೀತಲೋಕದ ಧ್ರುವತಾರೆಯಂತೆ ಬೆಳಗಿದರು. ಪಾಣಿನಿಯ ಅಷ್ಟಾಧ್ಯಾಯಿ, ಶರ್ವವರ್ಮನ ಕಾತಂತ್ರ, ಕೇಶಿರಾಜನ ಶಬ್ದಮಣಿದರ್ಪಣ, ನಿಜಗುಣಶಿವಯೋಗಿಗಳ ಕೈವಲ್ಯಪದ್ಧತಿ, ತರ್ಕಶಾಸ್ತ್ರ, ನ್ಯಾಯಶಾಸ್ತ್ರ ಶಬ್ದಾನುಶಾಸ್ತ್ರ, ಛಂದಶ್ಯಾಸ್ತ್ರ, ಕನ್ನಡ ವ್ಯಾಕರಣವನ್ನು ಶಾಸ್ತ್ರಬದ್ಧವಾಗಿ ಕಲಿತು ಅದರಲ್ಲಿ ನಿಷ್ಣತರಾದರು ಬ್ರೈಲ್ ಲಿಪಿ ಕಲಿತು ಅದರಲ್ಲಿಯೂ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಪಾರಂಗತರಾದರು. ಕನ್ನಡ, ಹಿಂದಿ, ಸಂಸ್ಕೃತ ಭಾಷೆಗಳಲ್ಲಿ ಅಗಾಧ ಪಾಂಡಿತ್ಯಗಳಿಸುವುದರೊಂದಿಗೆ ಗಾಯನ, ವಾದನ, ಸಾಹಿತ್ಯ, ಕೀರ್ತನೆ ಮೊದಲಾದ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ಮಾಡಿ ಜ್ಞಾನಯೋಗಿ, ಗಾನಯೋಗಿ ಎಂದು ಪ್ರಸಿದ್ಧರಾದರು. 75 ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿ ತ್ರಿಭಾಷಾ ಕವಿಯಾದರು. ಇವರು ನಾಡೋಜ, ಬಸವಶ್ರೀ, ಪದ್ಮಭೂಷಣ, ಗೌರವ ಡಾಕ್ಟರೇಟ್ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಅಂಧರ, ಅನಾಥರ ಪಾಲಿನ ದಿವ್ಯ ಬೆಳಕಾಗಿ 2010 ರಲ್ಲಿ ಅನಂತನಲ್ಲಿ ಲೀನವಾದರು. ಇವರ ಇಷ್ಟೆಲ್ಲ ಸಾಧನೆಗೆ ಅಂಗಹೀನತೆ ಎಂದೂ ಅಡ್ಡಿಯಾಗಲಿಲ್ಲ. | |
| | **ಅಥವಾ** | |
| | ಪಂಚಾಕ್ಷರಿ ಗವಾಯಿಗಳ ಸಂಚಾರಿ ಪಾಠಶಾಲೆ ಹೊಳೆ ಆಲೂರಿನಲ್ಲಿ ಕ್ಯಾಂಪ್ ಹಾಕಿದಾಗ ತಾಯಿ ಸಿದ್ಧಮ್ಮ ಬೆಳೆದು ದೊಡ್ಡವನಾದ ಮಗನನ್ನು ಕಾಣಲು ಬಂದರು. ಸಂಗೀತದ ಸಕಲ ವಿದ್ಯೆಗಳಲ್ಲಿ ಪಾರಂಗತನಾದ ಮಗನನ್ನು ನೋಡಿ ತಾಯಿಗೆ ಅಂತಃಕರಣ ತುಂಬಿ ಬಂದಿತು. ಪಂಚಾಕ್ಷರಿ ಗವಾಯಿಗಳ ಪಾದಕ್ಕೆರಗಿ ಮಗನನ್ನು ಮನೆಗೆ ಕಳುಹಿಸಿ ಕೊಡುವಂತೆ ಕೇಳಿಕೊಂಡರು. ಪಂಚಾಕ್ಷರಿ ಗವಾಯಿಗಳು "ಅವನು ಬಂದರೆ ಕರೆದುಕೊಂಡು ಹೋಗು ತಾಯಿ" ಎಂದು ವಾತ್ಸಲ್ಯಪೂರ್ಣವಾಗಿ ಹೇಳಿದರು. ಸಿದ್ಧಮ್ಮನವರು ಪುಟ್ಟಯ್ಯನೆಡೆಗೆ ಬಂದು ಮನೆಗೆ ಬರುವಂತೆ ಕೇಳಿಕೊಂಡರು. ಆಗ ಪುಟ್ಟಯ್ಯ "ನನಗೆ ನನ್ನ ಸರ್ವಸ್ವವೂ ಗುರುಗಳು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದಾರೆ, ಸಮಾಜದ ಋಣವನ್ನು ತೀರಿಸದೆ ಅದು ಹೇಗೆ ನಿನ್ನ ಜೊತೆ ಬರಲಿ ತಾಯಿ, ನೀನೆ ಹೇಳು ? ಭವದಲ್ಲಿಯ ಎಲ್ಲ ಬಂಧನಗಳನ್ನು ತೊಡೆದು ಹಾಕಿರುವೆ. ಗುರು ಪಂಚಾಕ್ಷರರೆ ನನ್ನ ಸರ್ವಸ್ವ ಅವರ ಆಜ್ಞಾಧಾರಕ ನಾನು. ನನ್ನ ಮಗನೆಂಬ ಭಾವವನ್ನು ತೊಡೆದು ಹಾಕಿ ನನ್ನನ್ನು ಸಾಮಾಜಕ್ಕರ್ಪಿಸು ತಾಯಿ'' ಎಂದು ಆರ್ತರಾದರು. ಆಗ ಸಿದ್ಧಮ್ಮನವರು ''ಮಗನೆ ನಿನಗೆ ಹೆಂಡತಿ, ಮಕ್ಕಳು, ಸಂಸಾರ ಎಂಬ ಬಂಧನದಲ್ಲಿ ಬಂಧಿಯಾಗುವುದು ಇಷ್ಟವಿಲ್ಲದಿದ್ದರೆ ನನ್ನ ಜೊತೆ ಬರುವುದು ಬೇಡ ಮಗನೆ ಗುರು ಪಂಚಾಕ್ಷರರು ತೋರಿದ ಮಾರ್ಗದಲ್ಲಿ ನಡೆದು ಅಮರನಾಗು ಕಂದ'' ಎಂದು ಹರಸಿ ಭಾರವಾದ ಹೃದಯದಿಂದ ದೇವರಹೊಸಪೇಟೆಗೆ ಮರಳಿದರು. ಹೀಗೆ ಪುಟ್ಟರಾಜರ ಜೀವನ ಸಮಾಜಕ್ಕೆ ಮುಡಿಪಾಯಿತು. | |
| **XI.** | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :** **(ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | **1 × 4 = 4** **( 2 + 2 )** |
| 36. | ಜನಕ ಮಹಾರಾಜ ಒಮ್ಮೆ ನಿದ್ರಾವಶನಾದಾಗ ವಿಶೇಷವಾದ ಒಂದು ಕನಸು ಕಂಡನು. ಶತ್ರುಗಳು ತನ್ನ ರಾಜ್ಯದ ಮೇಲೆ ದಾಳಿ ಮಾಡಿದಂತೆ, ತಾನು ಸೋತು ಎಲ್ಲವನ್ನು ಕಳೆದುಕೊಂಡು ಕಾಡನ್ನು ಸೇರಿದಂತಾಯಿತು. ವಿಪರೀತ ಹಸಿವೆಯಾಗಿ ಭಿಕ್ಷೆ ಬೇಡತೊಡಗಿದ. ಯಾರೂ ಭಿಕ್ಷೆಯನ್ನು ಕೊಡದಿದ್ದಾಗ ದುಃಖದಿಂದ ಬಿಕ್ಕಿಬಿಕ್ಕಿ ಅತ್ತನು. ತಟ್ಟನೆ ಎಚ್ಚರವಾಯಿತು. ಕಣ್ಣೀರಿನಿಂದ ತಲೆದಿಂಬು ತೊಯ್ದುಹೋಗಿದೆ. ಆದರೇನಂತೆ ಎಲ್ಲವೂ ಇದ್ದ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಹಾಗೇ ಇತ್ತು. ಅರಮನೆ, ಪರಿವಾರ, ಹಾಸಿಗೆ, ಮಂಚ ಎಲ್ಲ ಇದ್ದಂತೆಯೇ ಇದ್ದವು. ಹಾಗಾದರೆ ನಾನು ಈವರೆಗೆ ಅನುಭವಿಸಿದ್ದು ಸುಳ್ಳೇ ? ಎಂಬ ಸಂದೇಹ ಒದಗಿತ್ತು. ಸುಳ್ಳೆನ್ನಲು ಬರದು; ಸಾಕ್ಷಿಯಾಗಿ ಕಣ್ಣೀರಿನಿಂದ ತೊಯ್ದ ತಲೆದಿಂಬು ಇದೆ. ಹಾಗಾದರೆ ಅನುಭವಿಸುತ್ತಿರುವುದು ಸುಳ್ಳೇ ? ಈ ಪ್ರಶ್ನೆಗಳು ತಲೆಯನ್ನು ಕೊರೆಯಲಾರಂಭಿಸಿದವು. ಅದು ನಿಜವೋ ? ಇದು ನಿಜವೋ ? ಎಂದು ಬಡಬಡಿಸತೊಡಗಿದ. ಊಟ ನಿದ್ದೆಗಳಲ್ಲಿ ಆಸಕ್ತಿ ಕಳೆದುಕೊಂಡ. | |
| | ಚಿಂತಾಕ್ರಾಂತರಾದ ಪರಿವಾರದವರು ಮಹಾರಾಜನ ಪ್ರಶ್ನೆಗಳಿಗೆ ಉತ್ತರ ಕೊಟ್ಟವರಿಗೆ ವಿಶೇಷ ಬಹುಮಾನವನ್ನು ಕೊಡುವುದಾಗಿ ಸಾರಿದರು. ಒಂದು ದಿನ ಓರ್ವ ಜ್ಞಾನಿ ಮಿಥಿಲಾ ನಗರಕ್ಕೆ ಬಂದನು ಪ್ರಸ್ತುತ ಸಮಸ್ಯೆಯನ್ನು ಅರಿತು ಉತ್ತರಿಸಲು ರಾಜನ ಬಳಿಗೆ ಹೋದನು. ಜನಕ ಮಹಾರಾಜ ಜ್ಞಾನಿಯನ್ನು ಬರಮಾಡಿಕೊಂಡು ತಾನು ಕಂಡ ಕನಸನ್ನು ವಿವರಿಸಿ ಅದು ನಿಜವೋ ? ಇದು ನಿಜವೋ ? ಎಂದು ಪ್ರಶ್ನಿಸಿದ. ಜ್ಞಾನಿಯು ನಿದರ್ಶನಗಳನ್ನು ನೀಡುತ್ತಾ ಅದು ನಿಜವಲ್ಲ ಇದು ನಿಜವಲ್ಲ ಎಂದು ಹೇಳುತ್ತಾನೆ. ಈ ಅನುಭವಗಳ ಹಿಂದೆ ಇರುವ ಆತ್ಮ ಮಾತ್ರ ನಿಜ. ಹೇಗೆಂದರೆ ಸಮುದ್ರದ ಮೇಲೆ ಅಲೆಗಳು ತೇಲುತ್ತವೆ. ಒಂದು ದಿನ ದೊಡ್ಡ ಅಲೆ ಬರಬಹುದು; ಒಂದು ದಿನ ಚಿಕ್ಕ ಅಲೆ ಬರಬಹುದು ಅಲೆಗಳು ಸ್ಥಿರವಿಲ್ಲ. ಸಮುದ್ರ ಮಾತ್ರ ಸ್ಥಿರವಾದದ್ದು. ಹಾಗೆಯೆ ಜೀವನವೆಂಬ ಸಮುದ್ರದ ಮೇಲೆ ಸ್ವಪ್ನ ಹಾಗೂ ಜಾಗೃತ ಎಂಬ ಅಲೆಗಳು ಬರುತ್ತವೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಹೋಗುತ್ತವೆ. ಆತ್ಮ ಮಾತ್ರ ಸ್ಥಿರವಾದದ್ದು ಎಂದು ನಿದರ್ಶನದ ಮೂಲಕ ಜನಕ ಮಹಾರಾಜನ ಪ್ರಶ್ನೆಗೆ ಉತ್ತರ ನೀಡಿದನು. ಜ್ಞಾನಿಯ ಮಾತಿನಿಂದ ಸಂತೋಷಗೊಂಡ ಜನಕ ಮಹಾರಾಜನು ಪಾರಮಾರ್ಥವನ್ನು ಸಾಧಿಸಲು ಮನಸ್ಸನ್ನು ದೃಢಗೊಳಿಸಿದನು. | |
| | ***ಪ್ರಶ್ನೆಗಳು:*** | |
| | ಅ) ಆತ್ಮ ಮಾತ್ರ ಸ್ಥಿರವಾದದ್ದು ಎಂಬುದಕ್ಕೆ ಜ್ಞಾನಿ ನೀಡಿದ ನಿದರ್ಶನ ಯಾವುದು ? | |
| | ಆ) ಜನಕ ಮಹಾರಾಜನು ಕನಸಿನಲ್ಲಿ ಅನುಭವಿಸಿದ ಅನುಭವಗಳೇನು ? | |
| | ***ಉತ್ತರ :*** | |
| | ಅ) ಸಮುದ್ರದ ಮೇಲೆ ಅಲೆಗಳು ತೇಲುತ್ತವೆ. ಒಂದು ದಿನ ದೊಡ್ಡ ಅಲೆ ಬರಬಹುದು; ಒಂದು ದಿನ ಚಿಕ್ಕ ಅಲೆ ಬರಬಹುದು ಅಲೆಗಳು ಸ್ಥಿರವಿಲ್ಲ. ಸಮುದ್ರ ಮಾತ್ರ ಸ್ಥಿರವಾದದ್ದು. ಹಾಗೆಯೆ ಜೀವನವೆಂಬ ಸಮುದ್ರದ ಮೇಲೆ ಸ್ವಪ್ನ ಹಾಗೂ ಜಾಗೃತ ಎಂಬ ಅಲೆಗಳು ಬರುತ್ತವೆ ಹೋಗುತ್ತವೆ. ಆತ್ಮ ಮಾತ್ರ ಸ್ಥಿರವಾದದ್ದು ಎನ್ನುವ ನಿದರ್ಶನದ ಮೂಲಕ ಜ್ಞಾನಿಯು ಮಹಾರಾಜನ ಪ್ರಶ್ನೆಗೆ ಉತ್ತರ ನೀಡುತ್ತಾನೆ. | |
| | ಆ) ಜನಕ ಮಹಾರಾಜ ಕನಸಿನಲ್ಲಿ ಶತ್ರುಗಳು ತನ್ನ ರಾಜ್ಯದ ಮೇಲೆ ದಾಳಿ ಮಾಡಿದಂತೆ, ತಾನು ಸೋತು ಎಲ್ಲವನ್ನು ಕಳೆದುಕೊಂಡು ಕಾಡನ್ನು ಸೇರಿದಂತಾಯಿತು. ವಿಪರೀತ ಹಸಿವೆಯಾಗಿ ಭಿಕ್ಷೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಬೇಡತೊಡಗಿದ. ಯಾರೂ ಭಿಕ್ಷೆಯನ್ನು ಕೊಡದಿದ್ದಾಗ ಬಿಕ್ಕಿಬಿಕ್ಕಿ ಅತ್ತನು ತಟ್ಟನೆ ಎಚ್ಚರವಾಯಿತು. ಕಣ್ಣೀರಿನಿಂದ ತಲೆದಿಂಬು ತೊಯ್ದುಹೋಗಿದೆ. ಈ ರೀತಿ ಅನುಭವಗಳನ್ನು ಜನಕ ಮಹಾರಾಜ ಕನಸಿನಲ್ಲಿ ಅನುಭವಿಸಿದನು. | |
| **XII.** | **ಪ್ರಬಂಧ ಬರೆವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 4 = 4** |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ನಿರೂಪಣೆ | 2 ಅಂಕಗಳು |
| | ಭಾಷಾಶೈಲಿಗೆ, ಮುಕ್ತಾಯ / ಉಪಸಂಹಾರ | 1 ಅಂಕ |
| | ಒಟ್ಟು | 4 ಅಂಕಗಳು |
| 37. | ಕಂಪ್ಯೂಟರ್‌ನ ಉಪಯೋಗಗಳು<br>**ಅಥವಾ**<br>ಶೈಕ್ಷಣಿಕ ಪ್ರವಾಸ | |
| **XIII.** | **ಪತ್ರ ಲೇಖನ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 5 = 5** |
| 38. | ನಿಮ್ಮನ್ನು ಧಾರವಾಡದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಅಮೋಘ' ಎಂದು ಭಾವಿಸಿಕೊಂಡು, ನಿಮ್ಮ ಮುಂದಿನ ವ್ಯಾಸಂಗಕ್ಕಾಗಿ ವರ್ಗಾವಣೆ ಪತ್ರ ನೀಡುವಂತೆ ಕೋರಿ ಮುಖ್ಯಗುರುಗಳಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.<br>**ಅಥವಾ**<br>ನಿಮ್ಮನ್ನು ಕಲಬುರ್ಗಿಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಕಲ್ಪನಾ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸಿದ 'ಕರ್ನಾಟಕ ರಾಜ್ಯೋತ್ಸವ' ಕಾರ್ಯಕ್ರಮ ಕುರಿತು ಬಸವಕಲ್ಯಾಣ ನಿವಾಸಿಯಾದ 'ಸುನೀತಾ' ಎಂಬ ಹೆಸರಿನ ಗೆಳತಿಗೆ ಪತ್ರವನ್ನು ಬರೆಯಿರಿ.<br>***ಉತ್ತರ :*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ವ್ಯಾವಹಾರಿಕ ಪತ್ರ :* | |
| | ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ | 1 ಅಂಕ |
| | ವಿನ್ಯಾಸ, ಪದಬಳಕೆ, ಶೈಲಿ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | *ವೈಯಕ್ತಿಕ ಪತ್ರ :* | |
| | ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ | 1 ಅಂಕ |
| | ವಿನ್ಯಾಸ, ಪದಬಳಕೆ, ಶೈಲಿ | 1 ಅಂಕ |
| | ಒಟ್ಟು | 5 ಅಂಕಗಳು |